ಬಸವ ಕಲ್ಯಾಣದ ಪಶುವೈದ್ಯ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

273 (662) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣ ಮತ ಕ್ಷೇತ್ರದಲ್ಲಿ ಇರುವ ಪಶುವೈದ್ಯ ಆಸ್ಪತ್ರೆ ಹಾಗೂ ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು?

ಆ) ಇಲ್ಲಿಗೆ ಮಂಜೂರಾಗಿರುವ ವೈದ್ಯರು ಹಾಗೂ ಇತರೆ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಪೈಕಿ ಈಗ ಭರ್ತಿಯಾಗಿರುವ ಹಾಗೂ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಅವಧಿಯಿಂದ ಹುದ್ದೆಗಳು ಖಾಲಿಯಿವೆ?

ಈ) ಜಾನುವಾರುಗಳ ಹಿತದೃಷ್ಟಿಯಿಂದ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಪಶುಆಸ್ಪತ್ರೆ–2 ಮತ್ತು ಪಶುಚಿಕಿತ್ಸಾಲಯ–17.

ಆ) ಮಂಜೂರಾಗಿರುವ ವೈದ್ಯರು ಹಾಗೂ ಸಿಬ್ಬಂದಿ ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂ.	ಹುದ್ದೆ	ಮಂಜೂರಾತಿ
1	ಸಹಾಯಕ ನಿರ್ದೇಶಕರು	02
2	ಪಶುವೈದ್ಯಾಧಿಕಾರಿ	19
3	ಪಶುವೈದ್ಯ ಮೇಲ್ವಿಚಾರಕರು	02
4	ಹಿರಿಯ ಪಶುವೈದ್ಯ ಪರೀಕ್ಷಕರು	07
5	ಪಶುವೈದ್ಯ ಪರೀಕ್ಷಕರು	10
6	ಪಶುವೈದ್ಯ ಸಹಾಯಕರು	11
7	ಧ್ವಿದ.ಸ.	01
8	ವಾಹನ ಚಾಲಕರು	01
9	ಡಿ–ದರ್ಜೆ	38
	ಒಟ್ಟು	**91**

ಇ) "ಭರ್ತಿ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿವೆ.

ಕ್ರಮ ಸಂ.	ಹುದ್ದೆ	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	00	02
2	ಪಶುವೈದ್ಯಾಧಿಕಾರಿ	10	09
3	ಪಶುವೈದ್ಯ ಮೇಲ್ವಿಚಾರಕರು	02	00
4	ಹಿರಿಯ ಪಶುವೈದ್ಯ ಪರೀಕ್ಷಕರು	07	00
5	ಪಶುವೈದ್ಯ ಪರೀಕ್ಷಕರು	10	00
6	ಪಶುವೈದ್ಯ ಸಹಾಯಕರು	08	03
7	ಧ್ವಿದ.ಸ.	01	00
8	ವಾಹನ ಚಾಲಕರು	01	00
9	ಡಿ-ದರ್ಜೆ	09	29

ಖಾಲಿ ಇರುವ ಹುದ್ದೆಗಳು ಸುಮಾರು 3 ರಿಂದ 5 ವರ್ಷಗಳಿಂದ ಖಾಲಿ ಇರುತ್ತವೆ.

ಈ)

1. **ಸಹಾಯಕ ನಿರ್ದೇಶಕರು "** ಇಲಾಖೆಯಲ್ಲಿ ಹೆಚ್ಚುವರಿ ಪ್ರಭಾರದ ವ್ಯವಸ್ಥೆ ಮಾಡುವ ಮೂಲಕ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಸರಿದೂಗಿಸ ಲಾಗುವುದು.
2. **ಪಶುವೈದ್ಯಾಧಿಕಾರಿ ಹುದ್ದೆ** : ವಿಶೇಷ ನೇಮಕಾತಿ ನಿಯಮಗಳ ಮೂಲಕ ಇಲಾಖೆಯಲ್ಲಿ ಖಾಲಿ ಇರುವ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಉದ್ದೇಶಿಸಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ನೇಮಕಾತಿ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

3. **ಪಶುವೈದ್ಯ ಸಹಾಯಕರು :** ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಬಸವಕಲ್ಯಾಣ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.

4. **ಡಿ ದರ್ಜೆ' ನೌಕರರು : ಖಾಲಿ ಇರುವ 'ಡಿ ದರ್ಜೆ'** ಹುದ್ದೆಗಳನ್ನು ಆದ್ಯತೆ ಮೇರೆಗೆ ಹೊರ ಗುತ್ತಿಗೆ ಮುಖಾಂತರ ತುಂಬಲು ಕ್ರಮ ವಹಿಸಲಾಗುವುದು.

ಬೀದರ್ ಜಿಲ್ಲೆಯ ಪಶುವೈದ್ಯ ಶಾಲೆಗೆ ಔಷಧಿ ಸರಬರಾಜು ಮಾಡುವ ಬಗ್ಗೆ

274 (663) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ಚಿಕಿತ್ಸಾಲಯಗಳಿಗೆ ಎಷ್ಟು ಮೊತ್ತದ ಪಶುವೈದ್ಯ ಔಷಧಿಗಳನ್ನು ಸರಬರಾಜು ಮಾಡಲಾಗಿದೆ (ಆಸ್ಪತ್ರೆವಾರು ವಿವರಗಳನ್ನು ಒದಗಿಸುವುದು);

ಆ) ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಮುಂಬರುವ ದಿನಗಳಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ ಚಿಕಿತ್ಸಾಲಯಗಳಿಗೆ ಸರಬರಾಜಾದ ಔಷಧಿಗಳ ಮೊತ್ತದ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಿದೆ.

ಆ) ಸ್ವಲ್ಪ ಮಟ್ಟಿಗೆ ಕೊರತೆ ಇದೆ. ರಾಜ್ಯವಲಯ ಹಾಗೂ ಜಿಲ್ಲಾವಲಯಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಔಷಧಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಸಂಸ್ಥೆಗಳಿಗೆ ವಿತರಿಸಲಾಗಿದೆ.